| | |
|---|---|
| Test Paper : **II**<br>Test Subject : **PUBLIC ADMINISTRATION**<br>Test Subject Code : **K-2317** | Test Booklet Serial No. : ____________<br>OMR Sheet No. : ____________<br>Roll No. _ _ _ _ _ _ _ _<br>(Figures as per admission card) |

**Name & Signature of Invigilator/s**

Signature : ____________

Name : ____________

**Paper : II**

**Subject : PUBLIC ADMINISTRATION**

Time : 1 Hour 15 Minutes | Maximum Marks : 100

Number of Pages in this Booklet : **24** | Number of Questions in this Booklet : **50**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು.** OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

**Instructions for the Candidates**

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside the Paper I Booklet only**. If you mark at any place other than in the circles in the OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

# ಸಾರ್ವಜನಿಕ ಆಡಳಿತ
## ಪೇಪರ್ – II

ಗಮನಿಸಿ : ಈ ಪತ್ರಿಕೆಯು **(50) ಐವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**1.** ಈ ಕೆಳಗಿನವುಗಳಲ್ಲಿ ಯಾವುದು ವ್ಯವಸ್ಥೆಗೆ ಸರಿಯಾದವುಗಳಲ್ಲ ?

1. ಇದು ಒಂದು ಜೈವಿಕ ಪರಿಪೂರ್ಣತೆಯನ್ನು ಹೊಂದಲು ರಚನೆಯಾಗಿರುವುದು.
2. ಇದಕ್ಕೆ ಅನೇಕ ಸ್ವತಂತ್ರ ಭಾಗಗಳಿವೆ.
3. ಇದಕ್ಕೆ ಒಂದು ನಿರ್ದಿಷ್ಟ ವ್ಯಾಪ್ತಿ ಇದೆ.
4. ಇದು ಪ್ರಾಸಂಗಿಕವಾಗಿ ಅದರ ಪರಿಸರದೊಂದಿಗೆ ಪ್ರತಿಕ್ರಿಯಿಸುತ್ತದೆ.

(A) 1 ಮತ್ತು 3
(B) 2, 3 ಮತ್ತು 4
(C) 1, 2 ಮತ್ತು 3
(D) 2 ಮತ್ತು 4

**2.** ವರ್ತನಾವಾದದ ಬಗ್ಗೆ ಕೆಳಗಿನ ಯಾವ ಹೇಳಿಕೆಗಳು ಸರಿಯಾದವುಗಳು ?

1. ಇದು ಸಂಘಟನೆಯಲ್ಲಿ ಮನುಷ್ಯನೊಡನೆ ವ್ಯವಹರಿಸುತ್ತದೆ.
2. ಇದರ ಮೂಲವನ್ನು ಎಂ.ಪಿ. ಫಾಲ್ಲೆಟ್ ಮತ್ತು ಎಲ್ಟನ್ ಮಾಯೋರವರ ಬರವಣಿಗೆಯಲ್ಲಿ ಗುರುತಿಸಬಹುದು.
3. ಇದು ಅನೌಪಚಾರಿಕ ಸಂಬಂಧ ಮತ್ತು ಸಂಪರ್ಕಗಳಿಗೆ ಒತ್ತು ನೀಡುತ್ತದೆ.
4. ಇದರ ಪ್ರಮುಖ ಪ್ರತಿಪಾದಕ ಚೆಸ್ಟರ್ ಐ. ಬರ್ನಾರ್ಡ್.

(A) 1, 2, 3 ಮತ್ತು 4
(B) 2 ಮತ್ತು 3
(C) 1, 2 ಮತ್ತು 3
(D) 2, 3 ಮತ್ತು 4

**3.** ಕೆಳಗಿನವುಗಳಲ್ಲಿ ಯಾವುದು ಸರಿಯಾದವುಗಳು ?

1. ಕೌನ್ಸಿಲ್ ಡಿ'ಎಟಾಟ್ ಫ್ರಾನ್ಸ್‌ನ ನಾಗರೀಕ ಸೇವಕರ ರಾಜಕೀಯ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುತ್ತಾರೆ.
2. ಟ್ರೆಜರಿಯು ಬ್ರಿಟನ್ನಿನ ನಾಗರೀಕ ಸೇವಕರ ರಾಜಕೀಯ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುತ್ತದೆ.
3. ಹ್ಯಾಟ್ಚ್ ಕಾಯಿದೆಯು ಅಮೇರಿಕಾದ ನಾಗರೀಕ ಸೇವಕರ ರಾಜಕೀಯ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ.
4. ರಷ್ಯಾದ ನಾಗರೀಕ ಸೇವಾ ಸಿಬ್ಬಂದಿಯು ಎಲ್ಲಾ ರಾಜಕೀಯ ಹಕ್ಕುಗಳನ್ನು ಹೊಂದಿರುವರು.

(A) 1, 2 ಮತ್ತು 3
(B) 2, 3 ಮತ್ತು 4
(C) 2 ಮತ್ತು 3
(D) 1, 2, 3 ಮತ್ತು 4

**4.** ಜಿಲ್ಲಾ ಕಲೆಕ್ಟರ್‌ರವರ ಕಛೇರಿಗೆ ಸಂಬಂಧಿಸಿದಂತೆ ಕೆಳಗಿನ ಯಾವುವು ಸರಿಯಾದವುಗಳು ?

1. ಇದು 1774 ರಲ್ಲಿ ಸೃಷ್ಟಿಯಾಯಿತು.
2. ಇದಕ್ಕೆ ಇತರ ರಾಷ್ಟ್ರಗಳ ಆಡಳಿತದಲ್ಲಿ ಅನೇಕ ಸಮಾನಾಂತರವಾದವುಗಳಿವೆ.
3. ಇದನ್ನು ವಾರನ್ ಹೆಸ್ಟಿಂಗ್ಸ್ ಸೃಷ್ಟಿಸಿದ.
4. ಇದು ಮೊಘಲರ ಕಾಲದ ಕರೂರಿ–ಫೌಜ್‌ದಾರ ಬದಲಿಯಾಗಿ ಬಂದದ್ದು.

(A) 1, 3 ಮತ್ತು 4
(B) 2, 3 ಮತ್ತು 4
(C) 2 ಮತ್ತು 3
(D) 3 ಮತ್ತು 4

# PUBLIC ADMINISTRATION
## Paper – II

**Note :** This paper contains **fifty (50)** objective type questions. **Each** question carries **two (2)** marks. **All** questions are **compulsory**.

**1.** Which of the following are not correct about a system ?

1. It is an arrangement of things to form an organic whole.
2. It has number of independent parts.
3. It has an identifiable boundary.
4. It interacts occasionally with its environment.

(A) 1 and 3
(B) 2, 3 and 4
(C) 1, 2 and 3
(D) 2 and 4

**2.** Which of the following statements are correct about behavioural approach ?

1. It deals with a man in an organisation.
2. Its beginning can be traced to the writings of M.P. Follet and Elton Mayo.
3. It stresses an informal relationship and communication patterns.
4. Its most important champion was Chester I. Bernard.

(A) 1, 2, 3 and 4
(B) 2 and 3
(C) 1, 2 and 3
(D) 2, 3 and 4

**3.** Which of the following are correct ?

1. Council d'etat monitors the political activities of French Civil Servants.
2. Treasury Monitors the political activities of British Civil Servants.
3. Hatch Act restricts the political activities of American Civil Servants.
4. The civil servants in the Russia enjoyed all the political rights.

(A) 1, 2 and 3
(B) 2, 3 and 4
(C) 2 and 3
(D) 1, 2, 3 and 4

**4.** Which of the following are true about the office of District Collector ?

1. It was created in 1774.
2. It has many parallels in the administrative system of other countries.
3. It was created by Warren Hastings .
4. It succeeded the Karori-Faujdar of Mughal period.

(A) 1, 3 and 4
(B) 2, 3 and 4
(C) 2 and 3
(D) 3 and 4

**5.** ಕೆಳಗಿನ ಹೇಳಿಕೆಗಳಲ್ಲಿ ಯಾವುದು ಪೋಷಕ ನೌಕರಶಾಹಿಗೆ ಸರಿಯಾದವುಗಳು ?

1. ಇದರ ಸಾಂಪ್ರದಾಯಿಕ ಮೂಲ ಬ್ರಿಟನ್.
2. ಇದು ಬ್ರಿಟನ್‌ನಲ್ಲಿ 19 ನೇ ಶತಮಾನದ ಮೊದಲ ಅರ್ಧದವರೆಗೆ ಪ್ರಾಧಾನ್ಯತೆಯಲ್ಲಿತ್ತು.
3. ಇದರಲ್ಲಿ ನೇಮಕಾತಿಯು ವೈಯಕ್ತಿಕ ಸಹಾಯ ಹಾಗೂ ರಾಜಕೀಯ ಕೊಡುಗೆಗಳನ್ನು ಆಧರಿಸಿ ಕೊಂಡಿರುತ್ತದೆ.
4. ಇದನ್ನು 'ಸೂರೆ ಪದ್ಧತಿ' ಎಂತಲೂ ಕರೆಯಲಾಗುತ್ತದೆ.

(A) 1, 2, 3 ಮತ್ತು 4
(B) 1, 2 ಮತ್ತು 3
(C) 2, 3 ಮತ್ತು 4
(D) 1, 3 ಮತ್ತು 4

**6.** ಈ ಕೆಳಗಿನ ಹೇಳಿಕೆಗಳಲ್ಲಿ ಯಾವುವು ಸರಿ ?

1. ಉದ್ಯೋಗಿಯ ಅರ್ಹತೆಯನ್ನು ನಿಗದಿಪಡಿಸಲು ಇರುವ ಮಾನದಂಡಗಳಲ್ಲಿ ನೇಮಕ ಮಾಡುವವರ ವೈಯಕ್ತಿಕ ಅಭಿಪ್ರಾಯ ಅತ್ಯಂತ ಹಳೆಯದಾದದ್ದು.
2. ಸಾಮರ್ಥ್ಯ ದಾಖಲಾತಿಸುವಲ್ಲಿ ಅಮೇರಿಕಾ ಮತ್ತು ಬ್ರಿಟನ್ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸಿಕೊಂಡಿವೆ.
3. ಕೌಶಲ್ಯಾಧಾರಿತ ಹುದ್ದೆಗಳಾದ ಬೆರಳಚ್ಚುಗಾರರು, ಶೀಘ್ರಲಿಪಿಗಾರರು ಮೊದಲಾದವುಗಳಿಗೆ ನೇಮಕಾತಿ ಮಾಡುವಾಗ ಕಾರ್ಯತತ್ಪರತಾ ಪರೀಕ್ಷೆಯನ್ನು ಬಳಸಲಾಗುತ್ತದೆ.
4. ಭಾರತ ಮತ್ತು ಬ್ರಿಟನ್ ಪ್ರಬಂಧಾಧಾರಿತ ಪರೀಕ್ಷೆಯನ್ನು ಅಳವಡಿಸಿಕೊಂಡಿದ್ದರೆ ಅಮೇರಿಕಾ ಲಘು ಉತ್ತರದ ಪ್ರಶ್ನೆಗಳ ಪರೀಕ್ಷೆಯನ್ನು ಅನುಸರಿಸುತ್ತದೆ.

(A) 1 ಮತ್ತು 3
(B) 1, 2 ಮತ್ತು 3
(C) 1, 3 ಮತ್ತು 4
(D) 1, 2, 3 ಮತ್ತು 4

**7.** ಈ ಕೆಳಗಿನ ಹೇಳಿಕೆಗಳಲ್ಲಿ ಯಾವುವು ಆಡಳಿತದ ಆಂತರಿಕ ದೃಷ್ಟಿಯಿಂದ ಸರಿಯಾದವುಗಳು ?

1. ಇದು ನಿರ್ವಹಣಾ, ಗುಮಾಸ್ತ, ತಾಂತ್ರಿಕ ಮತ್ತು ದೈಹಿಕ ಪರಿಶ್ರಮದ ಚಟುವಟಿಕೆಗಳನ್ನು ಹೊಂದಿರುತ್ತದೆ.
2. ಆಡಳಿತವು ಎಲ್ಲಾ ವಿಧದ ಚಟುವಟಿಕೆಗಳ ಕ್ಷೇತ್ರದಲ್ಲಿಯೂ ಒಂದೇ ರೀತಿ ಇರುತ್ತದೆ.
3. ಆಡಳಿತವು ಒಂದು ಕ್ಷೇತ್ರದಿಂದ ಮತ್ತೊಂದು ಕ್ಷೇತ್ರಕ್ಕೆ ವ್ಯತ್ಯಾಸ ಇರುತ್ತದೆ.
4. ಇದು ಸರ್ಕಾರದ ಎಲ್ಲಾ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ, ಶಾಸನೀಯ, ಕಾರ್ಯಾಂಗ ಅಥವಾ ನ್ಯಾಯಾಂಗವಾಗಿರಬಹುದು.

(A) 1, 2 ಮತ್ತು 4
(B) 2 ಮತ್ತು 3
(C) 3 ಮತ್ತು 4
(D) 1 ಮತ್ತು 3

**8.** ಈ ಕೆಳಗಿನ ಯಾವುವು ಫ್ರೆಂಚ್ ಮತ್ತು ರೆವಿನ್‌ರವರ ಪ್ರಕಾರ ನಾಯಕತ್ವದ ಅಧಿಕಾರದ ಆಧಾರಗಳು ?

1. ಬಲಾತ್ಕಾರ ಅಧಿಕಾರ
2. ತಾಂತ್ರಿಕ ಅಧಿಕಾರ
3. ಉಲ್ಲೇಖಿತ ಅಧಿಕಾರ
4. ಆರಕ್ಷಕ ಅಧಿಕಾರ
5. ಶಾಸನಬದ್ಧ ಅಧಿಕಾರ

(A) 1, 2 ಮತ್ತು 3
(B) 2, 3 ಮತ್ತು 4
(C) 2, 4 ಮತ್ತು 5
(D) 1, 3 ಮತ್ತು 5

**5.** Which of the following statements are correct about patronage bureaucracy ?

1. Its traditional home has been the UK.
2. It prevailed in the UK till the end of the first half of $19^{th}$ century.
3. In this recruitment is based on personal favour or political reward.
4. It is also known as the 'spoils system'.

(A) 1, 2, 3 and 4

(B) 1, 2 and 3

(C) 2, 3 and 4

(D) 1, 3 and 4

**6.** Which of the following statements are true ?

1. Personal Judgement of the appointing authority is the oldest method of determining the qualification of the employees.
2. The USA and UK have evolved a scientific system of efficiency records.
3. Performance test is used to recruit personnel for skilled positions like typing, stenography and so on.
4. India and the UK follow the essay answer type tests while USA practices the short answer type tests.

(A) 1 and 3

(B) 1, 2 and 3

(C) 1, 3 and 4

(D) 1, 2, 3 and 4

**7.** Which of the following statements are correct about integral view of administration ?

1. It covers managerial, clerical, technical and manual activities.
2. Administration is same in all the fields of activities.
3. Administration differs from one field to another.
4. It includes all the activities of government whether falling in the sphere of legislature, executive or judiciary.

(A) 1, 2 and 4

(B) 2 and 3

(C) 3 and 4

(D) 1 and 3

**8.** Which of the following are the power basis of leadership interms of formulation by French and Ravin ?

1. Coercive power
2. Technical power
3. Referent power
4. Police power
5. Legitimate power

(A) 1, 2 and 3

(B) 2, 3 and 4

(C) 2, 4 and 5

(D) 1, 3 and 5

**9.** ''ಆಡಳಿತವು ಒಂದು ನೈತಿಕ ಕಾಯ್ದೆ ಮತ್ತು ಆಡಳಿತಗಾರ ಒಬ್ಬ ನೈತಿಕ ಪ್ರತಿನಿಧಿ'', ಈ ಹೇಳಿಕೆಯು ಇವರಿಗೆ ಸಂಬಂಧಿಸಿದೆ.

(A) ಎಲ್.ಡಿ. ವೈಟ್ (B) ಎಫ್.ಎ. ನಿಗ್ರೊ

(C) ಓ. ಟೀಡ್ (D) ಸಿ.ಇ. ಮೆರಿಯಮ್

**10.** ನೂತನ ಸಾರ್ವಜನಿಕ ನಿರ್ವಹಣೆಯು ಒತ್ತು ನೀಡುವುದು

(A) ಗ್ರಾಹಕ ನಿರ್ದೇಶಿತ ಸರ್ಕಾರ

(B) ವ್ಯವಹಾರಿಕ ಆಧಾರಿತ ಸರ್ಕಾರ

(C) ತೀರ್ಮಾನ ಕೈಗೊಳ್ಳುವಲ್ಲಿ ವೈಚಾರಿಕತೆ

(D) ನೌಕರಶಾಹಿಯ ಗಾತ್ರವನ್ನು ಕಡಿತಗೊಳಿಸುವುದು

**11.** ಕೋಷ್ಟಕ – I ನ್ನು ಕೋಷ್ಟಕ – II ರೊಂದಿಗೆ ಹೊಂದಿಸಿ.

| **ಕೋಷ್ಟಕ – I (ಸಮಿತಿಗಳು)** | **ಕೋಷ್ಟಕ – II (ಶಿಫಾರಸ್ಸುಗಳು)** |
|---|---|
| a. ಮೊದಲನೇ ಹೂವರ್ ಆಯೋಗ | 1. ಶಿಕ್ಷಣ ಹಾಗೂ ತರಬೇತಿ ವಿಭಾಗ |
| b. ಅಶೇಟನ್ ಆಯೋಗ | 2. ಅಮೇರಿಕಾ ಅಧ್ಯಕ್ಷರ ಕಾರ್ಯಾಲಯದ ಪುನರ್‌ರಚನೆ |
| c. ಬ್ರೌನ್‌ಲೋ ಸಮಿತಿ | 3. ಹಿರಿಯ ಸಲಹಾತ್ಮಕ ಸಲಹೆಗಾರ |
| d. ಫುಲ್‌ಟನ್ ಸಮಿತಿ | 4. ಹಿರಿಯ ಸೇವಾ ಕಾರ್ಯನಿರ್ವಾಹಕ |
| | 5. ಸಾಮಾನ್ಯ ಸೇವೆಗಳ ಆಡಳಿತ ಕಛೇರಿ |

**ಸಂಕೇತಗಳು :**

| | a | b | c | d |
|---|---|---|---|---|
| (A) | 5 | 1 | 4 | 3 |
| (B) | 5 | 1 | 2 | 3 |
| (C) | 4 | 1 | 2 | 5 |
| (D) | 3 | 1 | 5 | 3 |

**12.** ಕೋಷ್ಟಕ – I ನ್ನು ಕೋಷ್ಟಕ – II ರೊಂದಿಗೆ ಹೊಂದಿಸಿ.

| **ಕೋಷ್ಟಕ – I** | **ಕೋಷ್ಟಕ – II** |
|---|---|
| a. ನಿಯಂತ್ರಣ ವ್ಯಾಪ್ತಿ | 1. ತಂಡ ಕಾರ್ಯ ನಿರ್ವಹಣೆಯ ಮೂಲಕ ಉದ್ದೇಶ ಸಾಧಿಸುವುದು, ನೌಕರರ ಕಾರ್ಯ ನಿರ್ವಹಣೆಯಲ್ಲಿ ಕಂಡು ಬರುವಂತಹ ಲೋಪದೋಷಗಳನ್ನು ಹೋಗಲಾಡಿಸುವುದು ಹಾಗೂ ಸಂಘಟನೆಯ ಇತಿ – ಮಿತಿಗಳನ್ನು ನಿರ್ಧರಿಸುವುದು |
| b. ಅಧಿಕಾರಿಗಳ ಪ್ರತ್ಯಾನಿಯೋಜನ | 2. ಕೆಲವೊಂದು ಕರ್ತವ್ಯಗಳನ್ನು ನಿರ್ವಹಿಸಲು ಬದ್ಧತೆ |
| c. ಸಂಯೋಜನೆ | 3. ಒಬ್ಬ ಮೇಲ್ವಿಚಾರಕನು ತನ್ನ ಅಧೀನ ಅಧಿಕಾರಿಗಳಿಗೆ ವೈಯಕ್ತಿಕವಾಗಿ ನೀಡುವಂತಹ ನಿರ್ದೇಶನ |
| d. ಹೊಣೆಗಾರಿಕೆ | 4. ಒಬ್ಬ ಉನ್ನತ ಅಧಿಕಾರಿಯಿಂದ ಅಧೀನ ಅಧಿಕಾರಿಗಳು ಆದೇಶಗಳನ್ನು ಪಡೆದುಕೊಳ್ಳುವುದು |
| | 5. ಉನ್ನತ ಅಧಿಕಾರಿಯು ಅಧೀನ ಅಧಿಕಾರಿಗಳಿಗೆ ನಿರ್ದಿಷ್ಟ ಉದ್ದೇಶಗಳ ಸಾಧನೆಗಾಗಿ ಅಧಿಕಾರವನ್ನು ನೀಡುವುದು |

**ಸಂಕೇತಗಳು :**

| | a | b | c | d |
|---|---|---|---|---|
| (A) | 3 | 5 | 1 | 4 |
| (B) | 3 | 5 | 4 | 1 |
| (C) | 4 | 5 | 1 | 2 |
| (D) | 3 | 5 | 1 | 2 |

**9.** "Administration is a Moral Act and administrator is a moral agent", this statement is credited to whom ?

(A) L.D. White (B) F.A. Nigro
(C) O. Tead (D) C.E. Merriam

**10.** The New Public Management emphasises

(A) On customer driven government
(B) Entrepreneurial government
(C) Rationality in decision making
(D) Down sizing bureaucracy

**11.** Match List – **I** with List – **II**.

| **List – I (Committees)** | **List – II (Recommendations)** |
|---|---|
| a. First Hoover Commission | 1. Division of Training and Education |
| b. Asheton Commission | 2. Reorganisation of US president's office |
| c. Brownlow Committee | 3. Senior policy advisor |
| d. Fulton Committee | 4. Senior executive service |
| | 5. Office of general services administration |

**Codes :**

| | **a** | **b** | **c** | **d** |
|---|---|---|---|---|
| (A) | 5 | 1 | 4 | 3 |
| (B) | 5 | 1 | 2 | 3 |
| (C) | 4 | 1 | 2 | 5 |
| (D) | 3 | 1 | 5 | 3 |

**12.** Match List – **I** with List – **II**.

| **List – I** | **List – II** |
|---|---|
| a. Span of control | 1. Bringing about team work and removing, overlapping among the employees or limits of an organisation |
| b. Delegation | 2. Obligation to carry out certain duties |
| c. Coordination | 3. The number of subordinates that a superior can personally direct |
| d. Responsibility | 4. An employee should receive orders from one superior only |
| | 5. Conforment of authority by a superior to a subordinate for the fulfilment of a specific task |

**Codes :**

| | **a** | **b** | **c** | **d** |
|---|---|---|---|---|
| (A) | 3 | 5 | 1 | 4 |
| (B) | 3 | 5 | 4 | 1 |
| (C) | 4 | 5 | 1 | 2 |
| (D) | 3 | 5 | 1 | 2 |

13. ಕೋಷ್ಟಕ – I ನ್ನು ಕೋಷ್ಟಕ – II ರೊಂದಿಗೆ ಹೊಂದಿಸಿ.

| ಕೋಷ್ಟಕ – I | ಕೋಷ್ಟಕ – II |
|---|---|
| a. ಸಾಂಕೇತಿಕ ಕಡಿತ | 1. ''ಬೇಡಿಕೆಯ ಮೊತ್ತದಲ್ಲಿ ನಿರ್ದಿಷ್ಟ ಮೊತ್ತವನ್ನು ಕಡಿತಗೊಳಿಸುವುದು'' |
| b. ಮಿತವ್ಯಯತೆಯ ಕಡಿತ | 2. ''ಒಟ್ಟು ಮೊತ್ತದಲ್ಲಿ ಸಾಂಕೇತಿಕವಾಗಿ ಒಂದು ರೂಪಾಯಿಯನ್ನು ಮಾತ್ರ ಕಡಿತಗೊಳಿಸುವುದು'' |
| c. ಸಲಹಾತ್ಮಕ ಕಡಿತ | 3. ''ಒಟ್ಟು ಮೊತ್ತದಲ್ಲಿ ನೂರು ರೂಪಾಯಿಗಳನ್ನು ಮಾತ್ರ ಕಡಿತಗೊಳಿಸುವುದು'' |
| | 4. ''ಒಟ್ಟು ಮೊತ್ತದಲ್ಲಿ ಒಂದು ರೂಪಾಯಿಯನ್ನು ಮಾತ್ರ ಕಡಿತಗೊಳಿಸುವುದು'' |
| | 5. ''ಸಮಗ್ರ ಮೊತ್ತವನ್ನು ನೂರು ರೂಪಾಯಿಗಳಿಗೆ ಕಡಿತಗೊಳಿಸುವುದು'' |

**ಸಂಕೇತಗಳು :**

| | a | b | c |
|---|---|---|---|
| (A) | 5 | 1 | 2 |
| (B) | 5 | 3 | 1 |
| (C) | 3 | 1 | 4 |
| (D) | 3 | 5 | 2 |

14. ಕೋಷ್ಟಕ – I ನ್ನು ಕೋಷ್ಟಕ – II ರೊಂದಿಗೆ ಹೊಂದಿಸಿ.

| ಕೋಷ್ಟಕ – I (ಶಾಸನಗಳು) | ಕೋಷ್ಟಕ – II (ಅಧಿನಿಯಮಗಳು) |
|---|---|
| a. ಭಾರತದ ಮಂಡಳಿಗಳ ಶಾಸನ 1861 | 1. ದ್ವಿಮುಖ ಸರ್ಕಾರ ಪದ್ಧತಿಯನ್ನು ಪ್ರಾರಂಭಿಸಿತು |
| b. ಭಾರತ ಸರ್ಕಾರದ ಶಾಸನ 1919 | 2. ಬ್ರಿಟಿಷ್ ಸರ್ಕಾರದ ನೇರ ನಿಯಂತ್ರಣಕ್ಕೆ ಭಾರತೀಯ ವ್ಯವಹಾರಗಳನ್ನು ವಹಿಸಿಕೊಡಲಾಯಿತು |
| c. ಭಾರತೀಯ ಮಂಡಳಿಗಳ ಶಾಸನ 1892 | 3. ಪ್ರಾತಿನಿಧಿಕ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು |
| d. ಭಾರತದ ಪಿಟ್ಸ್ ಶಾಸನ 1784 | 4. ಪ್ರಾಂತೀಯ ಸ್ವಾಯತ್ತತೆಯನ್ನು ಪ್ರಾರಂಭಿಸಲಾಯಿತು |
| | 5. ಚುನಾವಣಾ ತತ್ವಗಳನ್ನು ಅಳವಡಿಸಿ ಕೊಳ್ಳಲಾಯಿತು |

**ಸಂಕೇತಗಳು :**

| | a | b | c | d |
|---|---|---|---|---|
| (A) | 3 | 5 | 2 | 1 |
| (B) | 5 | 3 | 2 | 1 |
| (C) | 4 | 2 | 3 | 1 |
| (D) | 2 | 4 | 1 | 3 |

**13.** Match List – **I** with List – **II**.

| **List – I** | **List – II** |
|---|---|
| a. Token cut motion | 1. "That the amount of the demand be reduced by a specified amount" |
| b. Economy cut motion | 2. "That the amount of the demand be reduced by Rs. One (1)" |
| c. Policy cut motion | 3. "That the amount of the demand be reduced by Rs. 100" |
| | 4. "That the amount of the demand be reduced to Rs. (1) one" |
| | 5. "That the amount of the demand be reduced to Rs. 100" |

**Codes :**

| | **a** | **b** | **c** |
|---|---|---|---|
| (A) | 5 | 1 | 2 |
| (B) | 5 | 3 | 1 |
| (C) | 3 | 1 | 4 |
| (D) | 3 | 5 | 2 |

**14.** Match List – **I** with List – **II**.

| **List – I (Acts)** | **List – II (Provisions)** |
|---|---|
| a. Indian Councils Act of 1861 | 1. Introduced Dyarchy |
| b. Government of India Act of 1919 | 2. Placed Indian affairs under the direct control of the British Government |
| c. Indian Councils Act of 1892 | 3. Introduced representative Institutions |
| d. Pitts India Act of 1784 | 4. Introduced provincial autonomy |
| | 5. Introduced the principles of election |

**Codes :**

| | **a** | **b** | **c** | **d** |
|---|---|---|---|---|
| (A) | 3 | 5 | 2 | 1 |
| (B) | 5 | 3 | 2 | 1 |
| (C) | 4 | 2 | 3 | 1 |
| (D) | 2 | 4 | 1 | 3 |

**15.** ಕೋಷ್ಟಕ – I ನ್ನು ಕೋಷ್ಟಕ – II ರೊಂದಿಗೆ ಹೊಂದಿಸಿ.

| ಕೋಷ್ಟಕ – I | ಕೋಷ್ಟಕ – II |
|---|---|
| a. ಕಾರುಬಾರಿ ಪ್ರಭುತ್ವ | 1. ಸ್ವಯಂ ಅಭಿವ್ಯಕ್ತೀಕರಣ |
| b. ಅಭಿಜಾತ ಸಿದ್ಧಾಂತ | 2. ಪರಿಸರ ಪ್ರೇರಿತ |
| c. ವ್ಯವಸ್ಥೆಗಳ ಸಿದ್ಧಾಂತ | 3. ವೈಚಾರಿಕತೆಯ ಆಧಾರದ ಮೇಲೆ ರಚಿತವಾದ ವ್ಯವಸ್ಥೆ |
| d. ವರ್ತನಾ ಸಿದ್ಧಾಂತ | 4. ತತ್ವಗಳ ಆಕರ |
| | 5. ಆಡಳಿತಾತ್ಮಕ ಪ್ರಕ್ರಿಯೆ |

**ಸಂಕೇತಗಳು :**

| | a | b | c | d |
|---|---|---|---|---|
| (A) | 3 | 5 | 2 | 1 |
| (B) | 5 | 3 | 1 | 2 |
| (C) | 4 | 2 | 3 | 1 |
| (D) | 2 | 4 | 1 | 3 |

**16.** ಕೋಷ್ಟಕ – I ನ್ನು ಕೋಷ್ಟಕ – II ರೊಂದಿಗೆ ಹೊಂದಿಸಿ.

| ಕೋಷ್ಟಕ – I | ಕೋಷ್ಟಕ – II |
|---|---|
| a. ಜಪಾನ್ | 1. ಪಾಲ್ಗೊಳ್ಳುವಿಕೆಯ ನಾಗರೀಕ ಸಂಸ್ಕೃತಿ |
| b. ಯುಎಸ್‌ಎ | 2. ವಿಭಿನ್ನವಾದ ನಾಗರೀಕ ಸಂಸ್ಕೃತಿ |
| c. ಇಂಗ್ಲೆಂಡ್ | 3. ಅಭಿಜಾತ ಆಡಳಿತಾತ್ಮಕ ವ್ಯವಸ್ಥೆ |
| d. ಫ್ರಾನ್ಸ್ | 4. ಅನುಕರಣಾತ್ಮಕ ಆಧುನಿಕತೆಯ ಆಡಳಿತ |
| | 5. ಪ್ರಜಾಸತ್ತಾತ್ಮಕ ಕೇಂದ್ರೀಕರಣ |

**ಸಂಕೇತಗಳು :**

| | a | b | c | d |
|---|---|---|---|---|
| (A) | 4 | 1 | 2 | 3 |
| (B) | 5 | 2 | 3 | 1 |
| (C) | 2 | 3 | 1 | 4 |
| (D) | 4 | 2 | 3 | 5 |

**17.** ನಗರ ಸ್ಥಳೀಯ ಆಡಳಿತ ಸಮಿತಿಗೆ ಸಂಬಂಧಪಟ್ಟಂತೆ ಯಾವ ಜೋಡಿಯು ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಹೊಂದಿಕೊಳ್ಳುತ್ತದೆ ?

| | |
|---|---|
| (A) ಗಿರಿಜಾಪತಿ ಮುಖರ್ಜಿ | 1. ನಗರ ಸಭೆಯ ಆಡಳಿತದಲ್ಲಿ ಮುಂಗಡ ಪತ್ರ ಸುಧಾರಣೆಗಳಿಗೆ ಸಂಬಂಧಪಟ್ಟ ಸಮಿತಿ |
| (B) R.K. ಖನ್ನಾ | 2. ನಗರ ಸ್ಥಳೀಯ ಆಡಳಿತ ಸಂಸ್ಥೆಗಳ ರಚನೆ, ಶಾಸನಗಳು ಹಾಗೂ ಅಧಿಕಾರಗಳನ್ನು ಕುರಿತು ರಚಿಸಲಾದ ಅಧ್ಯಯನ ಸಮಿತಿ |
| (C) A.P. ಜೈನ್ | 3. ಗ್ರಾಮೀಣ ಹಾಗೂ ನಗರಗಳ ಸಂಬಂಧಗಳ ಸಮಿತಿ |
| (D) ಜಾನ್ ಮಥಾಯ್ | 4. ಕರಾಕರಣೆ ವಿಚಾರಣಾ ಸಮಿತಿ |

**18.** ಕೋಷ್ಟಕ – I ನ್ನು ಕೋಷ್ಟಕ – II ರೊಂದಿಗೆ ಹೊಂದಿಸಿ.

| ಕೋಷ್ಟಕ – I (ಸಂಸ್ಥೆಗಳು) | ಕೋಷ್ಟಕ – II (ಸಂಬಂಧಪಟ್ಟ ವ್ಯಕ್ತಿಗಳು) |
|---|---|
| a. ಮುಖ್ಯ ಕಾರ್ಯದರ್ಶಿ | 1. ವಾರನ್ ಹೇಸ್ಟಿಂಗ್ಸ್ |
| b. ಸ್ಥಳೀಯ ಸರ್ಕಾರಗಳು | 2. ಲಾರ್ಡ್ ಕರ್ಜನ್ |
| c. ಜಿಲ್ಲಾ ಕಲೆಕ್ಟರ್ | 3. ವೆಲ್ಲೆಸ್ಲಿ |
| d. ವಿಭಾಗೀಯ ಕಮಿಷನರ್ | 4. ಬೆಂಟಿಂಕ್ |
| | 5. ರಿಪ್ಪನ್ |

**ಸಂಕೇತಗಳು :**

| | a | b | c | d |
|---|---|---|---|---|
| (A) | 3 | 5 | 1 | 2 |
| (B) | 2 | 5 | 4 | 1 |
| (C) | 4 | 5 | 2 | 3 |
| (D) | 3 | 5 | 1 | 4 |

**15.** Match List – **I** with List – **II**.

| **List – I** | **List – II** |
|---|---|
| a. Bureaucratic Theory | 1. Self actualisation |
| b. Classical Theory | 2. Ecological orientation |
| c. Systems Theory | 3. Rationalised structure |
| d. Behavioural Theory | 4. Body of principles |
| | 5. Administrative process |

**Codes :**

| | a | b | c | d |
|---|---|---|---|---|
| (A) | 3 | 5 | 2 | 1 |
| (B) | 5 | 3 | 1 | 2 |
| (C) | 4 | 2 | 3 | 1 |
| (D) | 2 | 4 | 1 | 3 |

**16.** Match List – **I** with List – **II**.

| **List – I** | **List – II** |
|---|---|
| a. Japan | 1. Participant civic culture |
| b. USA | 2. Differential civic culture |
| c. Britain | 3. Classic administrative system |
| d. France | 4. Adaptive modernising administration |
| | 5. Democratic centralism |

**Codes :**

| | a | b | c | d |
|---|---|---|---|---|
| (A) | 4 | 1 | 2 | 3 |
| (B) | 5 | 2 | 3 | 1 |
| (C) | 2 | 3 | 1 | 4 |
| (D) | 4 | 2 | 3 | 5 |

**17.** Which one of the following pairs of the Committee on Urban Local Administration correctly matches with the Chairman of the Committee ?

(A) Girijapathi Mukharji 1) Committee on Budgetary reform in municipal administration

(B) R.K. Khanna 2) Study group on constitution, powers and laws of urban local bodies

(C) A.P. Jain 3) Rural urban Relationship Committee

(D) John Mathai 4) Taxation Enquiry Committee

**18.** Match List – **I** with List – **II**.

| **List – I** **(Institutions)** | **List – II** **(Associated with)** |
|---|---|
| a. Chief Secretary | 1. Warren Hastings |
| b. Local Governments | 2. Lord Curzon |
| c. District Collector | 3. Wellesley |
| d. Divisional Commissioner | 4. Bentink |
| | 5. Rippon |

**Codes :**

| | a | b | c | d |
|---|---|---|---|---|
| (A) | 3 | 5 | 1 | 2 |
| (B) | 2 | 5 | 4 | 1 |
| (C) | 4 | 5 | 2 | 3 |
| (D) | 3 | 5 | 1 | 4 |

**19.** ಕೋಷ್ಟಕ – I ನ್ನು ಕೋಷ್ಟಕ – IIರೊಂದಿಗೆ ಹೊಂದಿಸಿ.

| ಕೋಷ್ಟಕ – I | ಕೋಷ್ಟಕ – II |
|---|---|
| a. ರಾಜಕೀಯತೆಯಿಂದ ನಿಷ್ಕ್ರೀಯಗೊಳಿಸಲಾದ ಕಾರುಬಾರಿ ಪ್ರಭುತ್ವ | 1. ಆಳುವ ಪಕ್ಷದ ವಿಚಾರಧಾರೆಯೊಂದಿಗೆ ಹೊಂದಿಕೊಂಡು ಹೋಗುವುದು |
| b. ಅರೆ ರಾಜಕೀಯ ಪ್ರೇರಿತ ಕಾರುಬಾರಿ ಪ್ರಭುತ್ವ | 2. ರಾಜಕೀಯ ಚಟುವಟಿಕೆಗಳಲ್ಲಿ ನಾಗರೀಕ ಸೇವಾ ನೌಕರರು ತೊಡಗಿಕೊಳ್ಳುವಿಕೆ |
| c. ರಾಜಕೀಯದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಕಾರುಬಾರಿ ಪ್ರಭುತ್ವ | 3. ರಾಜಕೀಯದಿಂದ ದೂರ ಉಳಿಯುವುದು |
| d. ಸಂಪೂರ್ಣವಾಗಿ ರಾಜಕೀಯವಾಗಿ ಪ್ರೇರಿತ ಕಾರುಬಾರಿ ಪ್ರಭುತ್ವ | 4. ರಾಜಕೀಯ ಕಾರ್ಯಾಂಗದಿಂದ ಪಕ್ಷ ಧೋರಣೆಗಳಿಂದ ಸಂಪೂರ್ಣವಾಗಿ ದೂರ ಉಳಿಯುವುದು |

**ಸಂಕೇತಗಳು :**

| | a | b | c | d |
|---|---|---|---|---|
| (A) | 4 | 2 | 3 | 1 |
| (B) | 3 | 4 | 1 | 2 |
| (C) | 3 | 2 | 1 | 4 |
| (D) | 3 | 4 | 2 | 1 |

**20.** ಕೋಷ್ಟಕ – I ನ್ನು ಕೋಷ್ಟಕ – IIರೊಂದಿಗೆ ಹೊಂದಿಸಿ.

| ಕೋಷ್ಟಕ – I | ಕೋಷ್ಟಕ – II |
|---|---|
| a. ಪರಿಣಾಮಕಾರಿ ಧುರೀಣತ್ವದ ಆಪತ್ಕಾಲೀನ ನಮೂನೆ | 1. ಚೆಸ್ಟರ್ ಬರ್ನಾರ್ಡ್ |
| b. ವ್ಯವಸ್ಥಾಪನಾ ಜಾಲ | 2. ಎಮ್.ಪಿ.ಫಾಲೆಟ್ |
| c. ಧುರೀಣತ್ವದ ಲಕ್ಷಣ ಸಿದ್ಧಾಂತ | 3. ಫ್ರೆಡ್ ಇ. ಫೀಡ್ಲರ್ |
| d. ಸ್ಥಾನಮಾನ, ವ್ಯಕ್ತಿತ್ವ ಹಾಗೂ ಕಾರ್ಯಗಳ ಧುರೀಣತ್ವ | 4. ರೆನ್ಸಿಸ್ ಲಿಂಕರ್ಟ್ |
| | 5. ಬ್ಲಾಕ್ ಮತ್ತು ಮೌಂಟನ್ |

**ಸಂಕೇತಗಳು :**

| | a | b | c | d |
|---|---|---|---|---|
| (A) | 3 | 4 | 2 | 1 |
| (B) | 3 | 5 | 1 | 2 |
| (C) | 4 | 3 | 2 | 5 |
| (D) | 4 | 2 | 5 | 1 |

**19.** Match List – **I** with List – **II**.

| List – I | List – II |
|---|---|
| a. Depoliticised Bureaucracy | 1. Identifies itself with the ruling party ideology |
| b. Semi-politicised Bureaucracy | 2. Has a high degree of involvement of civil servants in the political activities |
| c. Committed Politicised Bureaucracy | 3. Remain a political |
| d. Fully politicised Bureaucracy | 4. Disseminated by the political executive to act on party lines |

**Codes :**

| | a | b | c | d |
|---|---|---|---|---|
| (A) | 4 | 2 | 3 | 1 |
| (B) | 3 | 4 | 1 | 2 |
| (C) | 3 | 2 | 1 | 4 |
| (D) | 3 | 4 | 2 | 1 |

**20.** Match List – **I** with List – **II**.

| List – I | List – II |
|---|---|
| a. Contingency model of leadership effectiveness | 1. Chester Bernard |
| b. Managerial Grid | 2. M.P. Follet |
| c. Trait theory of leadership | 3. Fred E. Fiedler |
| d. Leaderships of position, personality and function | 4. Rensis Linkert |
| | 5. Blake and Monton |

**Codes :**

| | a | b | c | d |
|---|---|---|---|---|
| (A) | 3 | 4 | 2 | 1 |
| (B) | 3 | 5 | 1 | 2 |
| (C) | 4 | 3 | 2 | 5 |
| (D) | 4 | 2 | 5 | 1 |

**ಸೂಚನೆಗಳು : (21 – 27)**

ಕೆಳಗೆ ಕೆಲವು ಹೇಳಿಕೆಗಳನ್ನು ನಮೂದಿಸಲಾಗಿದೆ. ಒಂದು ಹೇಳಿಕೆಯನ್ನು ಪ್ರತಿಪಾದನೆಯೆಂದು ಕರೆಯಲಾಗುತ್ತದೆ ಹಾಗೂ ಇನ್ನೊಂದು ಹೇಳಿಕೆಯನ್ನು ಕಾರಣ ಎಂದು ಕರೆಯಲಾಗುತ್ತದೆ.

A ಎಂಬ ಪ್ರತಿಪಾದನೆ ಹಾಗೂ R ಎಂಬ ಕಾರಣ ಇವುಗಳು ಸರಿಯಾಗಿವೆಯೇ ಎಂಬುದನ್ನು ನಿರ್ಧರಿಸಬೇಕು ಹಾಗೂ ಕಾರಣವು ಪ್ರತಿಪಾದನೆಯ ಸರಿಯಾದ ವಿವರಣೆಯಾಗಿರುತ್ತದೆ ಎಂಬುದನ್ನು ನಿರ್ಧರಿಸಬೇಕು. ಕೆಳಗೆ ಕಾಣಿಸಿದ ಸಂಕೇತಗಳಲ್ಲಿ ಒಂದನ್ನು ಆಯ್ಕೆಮಾಡಬೇಕು.

**ಸಂಕೇತಗಳು :**

(A) (A) ಹಾಗೂ (R) ಸರಿಯಾಗಿರುತ್ತವೆ ಮತ್ತು (R) ಎಂಬುದು (A) ಎಂಬುದರ ಸರಿಯಾದ ವಿವರಣೆಯಾಗಿರುತ್ತದೆ

(B) (A) ಹಾಗೂ (R) ಸರಿಯಾದ ಉತ್ತರವಾಗಿರುತ್ತದೆ ಆದರೆ (R) ಎಂಬುದು (A) ಎಂಬುದರ ಸರಿಯಾದ ಉತ್ತರವಾಗಿರುವುದಿಲ್ಲ

(C) (A) ಸರಿಯಾದ ಉತ್ತರವಾಗಿರುತ್ತದೆ ಆದರೆ (R) ತಪ್ಪಾಗಿರುತ್ತದೆ

(D) (A) ಎಂಬುದು ತಪ್ಪಾಗಿರುತ್ತದೆ ಆದರೆ (R) ಎಂಬುದು ಸರಿಯಾಗಿರುತ್ತದೆ

**21.** **ಪ್ರತಿಪಾದನೆ (A)** : ಹರ್ಬರ್ಟ್ ಸೈಮನ್ ಅವರ ಆಡಳಿತಾತ್ಮಕ ಸಿದ್ಧಾಂತದಲ್ಲಿ ಸಕಾರಾತ್ಮಕ ದೃಷ್ಟಿಕೋನ ಅನುಸರಿಸಿರುವರು.

**ಕಾರಣ (R)** : ಸಂಗತಿಗಳನ್ನು ಪರಿಗಣಿಸುವ ಮೂಲಕ ಆಡಳಿತ ವಿಜ್ಞಾನವಾಗಿ ಪರಿಣಮಿಸಿದೆ ಮತ್ತು ಮೌಲ್ಯಗಳ ಜೊತೆಯಲ್ಲಿ ವ್ಯವಹರಿಸುವುದಿಲ್ಲ ಎಂಬುದರ ಕಲ್ಪನೆಯನ್ನು ಇದು ಆಧರಿಸಿದೆ.

**22.** **ಪ್ರತಿಪಾದನೆ (A)** : ಸರ್ಕಾರದ ನೀತಿ ಕಾರ್ಯದಲ್ಲಿ ಸಾಮಾನ್ಯರು ಪ್ರಮುಖವಾದ ಪಾತ್ರವನ್ನು ವಹಿಸಿರುವರು.

**ಕಾರಣ (R)** : ಕೇಂದ್ರ ಮತ್ತು ರಾಜ್ಯ ಸರ್ಕಾರದಲ್ಲಿ ಬೃಹತ್ ಸಂಖ್ಯೆಯ ಉನ್ನತ ಹುದ್ದೆಗಳು ವಿಶಿಷ್ಟರಿಂದ ನಿರ್ವಹಿಸಲ್ಪಡುತ್ತವೆ.

**23.** **ಪ್ರತಿಪಾದನೆ (A)** : ಶ್ರೇಣಿ ಪದ್ಧತಿ ಕ್ಲಿಷ್ಟತೆಯನ್ನು ಉಂಟುಮಾಡುತ್ತದೆ ಮತ್ತು ಮಾನವೀಯ ಸಂಬಂಧಗಳ ಮೇಲೆ ಪರಿಣಾಮ ಬೀರುತ್ತವೆ.

**ಕಾರಣ (R)** : ಶ್ರೇಣಿ ಪದ್ಧತಿಯು ಸಂಘಟನೆಯಲ್ಲಿ ಸಾಂಗತ್ಯತೆಯನ್ನು ಸಾಧಿಸುವ ಮಾರ್ಗವಾಗಿದೆ.

**24.** **ಪ್ರತಿಪಾದನೆ (A)** : ಫ್ರೆಡ್‌ರಿಕ್ ಟೇಲರ್‌ರವರ ಕಾರ್ಯನಿರ್ವಾಹಕ ಮುಕಾದವಮ್ ಪದ್ಧತಿಯು ಸಾಂಪ್ರದಾಯಿಕ ಆಡಳಿತ ವ್ಯವಸ್ಥೆಯಲ್ಲಿ ಅಪ್ರಯೋಜಕವಾಗಿರುತ್ತದೆ.

**ಕಾರಣ (R)** : ಕಾರ್ಯನಿರ್ವಾಹಕ ಮೇಲ್ವಿಚಾರಣೆ ಅಧಿಕಾರವು ಕೆಳಹಂತದ ಕಾರ್ಮಿಕರ ಮೇಲೆ ಪರಿಣಾಮವನ್ನು ಉಂಟುಮಾಡುತ್ತದೆ.

**25.** **ಪ್ರತಿಪಾದನೆ (A)** : ಸಂಘಟನೆಯ ವಿವಿಧ ಹಂತಗಳನ್ನು ಕಡಿಮೆಗೊಳಿಸಿದರೆ ನಿಯಂತ್ರಣ ವ್ಯಾಪ್ತಿಯನ್ನು ಕುಗ್ಗಿಸಿದರೆ ಸಂವಹನ ಪ್ರಕ್ರಿಯೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.

**ಕಾರಣ (R)** : ನಿಯಂತ್ರಣ ವ್ಯಾಪ್ತಿಯು ಉನ್ನತ ಅಧಿಕಾರಗಳ ಸಂಬಂಧಗಳ ವಿವಿಧ ಆಯಾಮಗಳನ್ನು ನಿರ್ಧರಿಸುತ್ತವೆ.

**26.** **ಪ್ರತಿಪಾದನೆ (A)** : ನಾಗರೀಕ ಸೇವಾ ವ್ಯವಸ್ಥೆಯಲ್ಲಿ ಬದಲಾವಣೆಯು ಅವಶ್ಯಕತೆಗಾಗಿ ನಿರ್ದಿಷ್ಟ ಅಧಿಕಾರವಧಿ ವ್ಯವಸ್ಥೆಯನ್ನು ಸಾಂಸ್ಥೀಕರಣಗೊಳಿಸಲಾಗಿದೆ.

**ಕಾರಣ (R)** : ಅಧಿಕಾರವಧಿ ನಿಗದಿಕರಣವು ಒಕ್ಕೂಟ ವ್ಯವಸ್ಥೆಯಲ್ಲಿ ಅಸಮರ್ಪಕವಾಗಿರುವುದು.

**27.** **ಪ್ರತಿಪಾದನೆ (A)** : ಸರ್ಕಾರವು ಸುಗ್ರೀವಾಜ್ಞೆಯ ಬದಲಾಗಿ ವಿಧೇಯಕವನ್ನು ಮಂಡಿಸುವಾಗ ಸುಗ್ರೀವಾಜ್ಞೆಗೆ ಸಂಬಂಧಪಟ್ಟಂತಹ ಸ್ಥಿತಿಗತಿಗಳ ಬಗ್ಗೆ ಸಂಪೂರ್ಣ ವಿವರಣೆಯನ್ನು ನೀಡಬೇಕಾಗುತ್ತದೆ.

**ಕಾರಣ (R)** : ಸಂಸತ್ತಿನ ಶಾಸನೀಯ ಅಧಿಕಾರಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರಪತಿಯು ಸುಗ್ರೀವಾಜ್ಞೆಯನ್ನು ಹೊರಡಿಸಲು ಅಧಿಕಾರ ಹೊಂದಿರುತ್ತಾರೆ.

**Directions :**

The following Questions from **21 – 27** consist of two statements, one labelled the 'Assertion A' and the other labelled the 'Reason R' you are to examine these two statements carefully and decide if the Assertion A and the Reason R are individually true and if so, whether the Reason is a correct explanation of the Assertion. Select your answers to these items using the codes given below and mark your answer sheet accordingly.

**Codes :**

(A) Both (A) and (R) are true and (R) is the correct explanation of (A)

(B) Both (A) and (R) are true but (R) is not a correct explanation of (A)

(C) (A) is true but (R) is false

(D) (A) is false but (R) is true

**21.** **Assertion (A)** : In his administrative theory Herbert Simon followed positivist approach.

**Reason (R)** : It is based on the assumption the administration can be reduced to a science by considering facts and not dealing with values.

**22.** **Assertion (A)** : Generalists plays an important role in the policy function of the government.

**Reason (R)** : A large number of the top posts in the Union and State Governments are manned by the specialists.

**23.** **Assertion (A)** : Hierarchy brings rigidity and affects human relationship in administration.

**Reason (R)** : Hierarchy is a built in device to achieve coherence in the organization.

**24.** **Assertion (A)** : Fredrick Taylor's concept of functional foremanship is regarded as unworkable in traditional administration.

**Reason (R)** : In functional supervision, authority of the expert is brought to bear fully upon the operator.

**25.** **Assertion (A)** : Narrowing of the span of control, has undesirable effect of hampering communication by decreasing the number of organisational levels.

**Reason (R)** : Span of control determines permutations and combinations of relationships requiring the attention of the superiors.

**26.** **Assertion (A)** : The tenure system is essentially a institutionalisation of the need for change at higher levels in the civil service.

**Reason (R)** : The tenure system does not fit in well in a federal policy.

**27.** **Assertion (A)** : Whenever government seeks to replace an ordinance by a bill, a statement explaining the circumstances. Which necessitated promulgation of ordinance must accompany the bill.

**Reason (R)** : President shall have the power to legislate on any subject through an ordinance which is co-extensive with the legislative powers of parliament.

**28. ಪ್ರತಿಪಾದನೆ(A)** : ಸಂಪೂರ್ಣ ಸ್ವಚ್ಛತಾ ಆಂದೋಲನವು ಬಯಲು ಶೌಚಾಲಯವನ್ನು ನಿಷೇಧಿಸುವುದು, ಸ್ವಚ್ಛತೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಪೂರೈಸುತ್ತದೆ ಮತ್ತು ಪರಿಣಾಮಕಾರಿ ನಿರ್ವಹಣೆ ಜನರ ಹಿತರಕ್ಷಣೆಯನ್ನು ಹೊಂದಿರುತ್ತದೆ.

**ಕಾರಣ (R)** : ಮಾಹಿತಿ, ಶಿಕ್ಷಣ, ಸಂವಹನ ಮೂಲಕ ಜನರನ್ನು ಕ್ರೋಡೀಕರಣಗೊಳಿಸುವ ಉದ್ದೇಶವನ್ನು ಆಂದೋಲನವು ಹೊಂದಿದೆ.

**ಸಂಕೇತಗಳು :**

(A) (A) ಮತ್ತು (R) ಸರಿಯಾಗಿದೆ ಆದರೆ (R) ಎಂಬುದು(A) ಯ ಸರಿಯಾದ ವಿವರಣೆಯಾಗಿದೆ

(B) (A) ಮತ್ತು (R) ಎರಡೂ ಸರಿಯಾಗಿದೆ ಆದರೆ (R) ಎಂಬುದು (A) ಯ ಸರಿಯಾದ ವಿವರಣೆಯಲ್ಲ

(C) (A) ಸರಿಯಾಗಿದೆ ಆದರೆ (R) ಎಂಬುದು ಸುಳ್ಳು

(D) (A) ಸುಳ್ಳು ಆದರೆ (R) ಸರಿಯಾಗಿದೆ

**29. ಪ್ರತಿಪಾದನೆ(A)** : ಆಡಳಿತಾತ್ಮಕ ಸುಧಾರಣೆಗಳು ದೂರ ಸಂಪರ್ಕ ರಂಗದಲ್ಲಿ ಖಾಸಗೀಕರಣದ ಮೂಲಕ ಬಡ ನಾಗರೀಕರಿಗೂ ದೂರವಾಣಿ ಸೌಲಭ್ಯಗಳು ದೊರಕಿದವು.

**ಕಾರಣ(R)** : ಖಾಸಗೀಕರಣವು ಸೇವೆಗಳ ಸಲ್ಲಿಕೆಯಲ್ಲಿ ಸ್ಪರ್ಧೆಯನ್ನು ಉಂಟುಮಾಡುತ್ತವೆ. ವೆಚ್ಚವನ್ನು ಕಡಿತಗೊಳಿಸುತ್ತವೆ ಹಾಗೂ ಗುಣಮಟ್ಟವನ್ನು ಕಾಪಾಡುತ್ತವೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಸರಿಯಾಗಿದೆ ಮತ್ತು (R) ಎಂಬುದು (A) ಯ ಸರಿಯಾದ ವಿವರಣೆಯಾಗಿದೆ

(B) (A) ಮತ್ತು (R) ಎರಡೂ ಸರಿಯಾಗಿದೆ ಆದರೆ (R) ಎಂಬುದು (A) ಯ ಸರಿಯಾದ ವಿವರಣೆಯಾಗಿಲ್ಲ

(C) (A) ಯು ಸರಿಯಾಗಿದೆ ಆದರೆ (R) ಸುಳ್ಳಾಗಿದೆ

(D) (A) ಯು ಸುಳ್ಳಾಗಿದ್ದು (R) ಎಂಬುದು ಸರಿಯಾಗಿದೆ

**30. ಪ್ರತಿಪಾದನೆ (A)** : PDS ಮತ್ತು MNREGS ಕಾರ್ಯಕ್ರಮಗಳಲ್ಲಿ ವಿದ್ಯುನ್ಮಾನ ಆಳ್ವಿಕೆ ಮತ್ತು ಭಾಗವಹಿಸುವಿಕೆ ಆಡಳಿತವು ಭ್ರಷ್ಟಾಚಾರವನ್ನು ಕಡಿಮೆಗೊಳಿಸುತ್ತದೆ.

**ಕಾರಣ (R)** : ಮಾಹಿತಿ ಗಣಕೀಕರಣ ಮತ್ತು ಫಲಾನುಭವಿಗಳ ಗುರುತಿಸುವಿಕೆಯು ಮತ್ತು ಗ್ರಾಮಸಭೆಗಳ ಮೂಲಕ ಕೆಲಸಗಳು ಪರಿಣಾಮಕಾರಿ ಅನುಷ್ಠಾನಕ್ಕೆ ಕಾರಣವಾಗುತ್ತವೆ.

**ಸಂಕೇತಗಳು :**

(A) (A) ಮತ್ತು (R) ಎರಡೂ ಸರಿಯಾಗಿದೆ (R) ಎಂಬುದು(A) ಯ ಸರಿಯಾದ ವಿವರಣೆಯಾಗಿದೆ

(B) (A) ಮತ್ತು (R) ಎರಡೂ ಸರಿಯಾಗಿದೆ ಆದರೆ (R) ಎಂಬುದು (A) ಯ ಸರಿಯಾದ ವಿವರಣೆಯಾಗಿಲ್ಲ

(C) (A) ಯು ಸರಿಯಾಗಿದೆ ಆದರೆ (R) ತಪ್ಪಾಗಿದೆ

(D) (A) ಯು ತಪ್ಪಾಗಿದೆ ಆದರೆ (R) ಸರಿಯಾಗಿದೆ

**31.** ಹೆನ್ರಿ ಫ್ರೆಯೋಲ್ ಒಂದು ಸಂಘಟನೆಯ ಎಲ್ಲಾ ಕಾರ್ಯ ಚಟುವಟಿಕೆಗಳನ್ನು __________ ಗುಂಪುಗಳಾಗಿ ವಿಂಗಡಿಸಿದ್ದಾರೆ.

(A) ಐದು ಗುಂಪುಗಳಾಗಿ

(B) ಆರು ಗುಂಪುಗಳಾಗಿ

(C) ಎಂಟು ಗುಂಪುಗಳಾಗಿ

(D) ಒಂಭತ್ತು ಗುಂಪುಗಳಾಗಿ

**32.** 'Y' (ವೈ) ಸಿದ್ಧಾಂತ ಇವರೊಂದಿಗೆ ಸಂಬಂಧಿಸಿದೆ.

(A) ಮಾಸ್ಲೋ (B) ಮ್ಯಾಕ್ ಗ್ರೆಗೋರ್

(C) ಲಿಕರ್ಟ್ (D) ಡ್ರಕ್ಕರ್

**33.** ಭಾಗವಹಿಸುವಿಕಾ ಮಾದರಿಯ ನಾಯಕತ್ವವು ಹೆಚ್ಚು ಜನಪ್ರಿಯವಾದುದು ಕೆಳಗಿನ ಯಾವುದರ ಕಾಲದಲ್ಲಿ ಮತ್ತು ನಂತರ

(A) ವ್ಯವಸ್ಥಾ ಸಿದ್ಧಾಂತ

(B) ವರ್ತನಾ ಸಿದ್ಧಾಂತ

(C) ಮಾನವ ಸಂಬಂಧಿ ಸಿದ್ಧಾಂತ

(D) ವೈಜ್ಞಾನಿಕ ನಿರ್ವಹಣಾ ಸಿದ್ಧಾಂತ

**28.** **Assertion (A)** : Total sanitation campaign (eradicate open defecation, sanitation, safe water, excreta and waste water disposal) is critical for effective implementation of programme for well being of people.

**Reason (R)** : The campaign aims to mobilize people through Information, Education and Communication (IEC).

**Codes :**

(A) Both (A) and (R) are true but (R) is the correct explanation of (A)

(B) Both (A) and (R) are true but (R) is not a correct explanation of (A)

(C) (A) is true but (R) is false

(D) (A) is false but (R) is true

**29.** **Assertion (A)** : Administrative reforms through privatization in telecom sector resulted in better access of telephones to even the poor.

**Reason (R)** : Privatization brings competition among the service providers in reducing costs and ensuring quality.

**Codes :**

(A) Both (A) and (R) are true and (R) is the correct explanation of (A)

(B) Both (A) and (R) are true but (R) is not a correct explanation of (A)

(C) (A) is true but (R) is false

(D) (A) is false but (R) is true

**30.** **Assertion (A)** : E-Governance and participatory governance facilitated the reduction of corruption in PDS and MNREGS programmes.

**Reason (R)** : Computerisation of information and identification of beneficiaries and works through Grama Sabha are responsible for effective implementation.

**Codes :**

(A) Both (A) and (R) are true and (R) is the correct explanation of (A)

(B) Both (A) and (R) are true but (R) is not a correct explanation of (A)

(C) (A) is true but (R) is false

(D) (A) is false but (R) is true

**31.** Henry Fayol divided all activities in an organisation in to

(A) Five Groups

(B) Six Groups

(C) Eight Groups

(D) Nine Groups

**32.** Theory – 'Y' is associated with

(A) Maslow (B) Mc Gregor

(C) Likert (D) Drucker

**33.** Participative style of leadership became popular during and after the era of which one of the following ?

(A) System theory

(B) Behavioural theory

(C) Human relation theory

(D) Scientific management theory

**34.** ಈ ಕೆಳಗಿನ ಯಾವುದನ್ನು ಮಾರ್ಕ್ಸ್ ವೆಬರ್‌ರವರು ನೌಕರ ಶಾಹಿಯ ಮುಖ್ಯ ಲಕ್ಷಣಗಳೆಂದು ಗುರುತಿಸಿರುವರು.

1. ಮೇಲ್ವಿಚಾರಣೆ ಮತ್ತು ಅಧೀನ ಪದ್ಧತಿ
2. ಏಕ ಆದೇಶ
3. ವೃತ್ತಿ ಅವಶ್ಯಕ ಮತ್ತು ಕೌಶಲ್ಯ ತರಬೇತಿ

**ಸಂಕೇತಗಳು :**

(A) 1 ಮತ್ತು 2 ಮಾತ್ರ (B) 2 ಮತ್ತು 3 ಮಾತ್ರ

(C) 1 ಮತ್ತು 3 ಮಾತ್ರ (D) 1, 2 ಮತ್ತು 3

**35.** ಅಂತರ್‌ವ್ಯಕ್ತಿಯ ಸಂಪರ್ಕಕ್ಕಿರುವ ಮುಖ್ಯ ತಡೆಗಳು ಯಾವುವು ಎಂದರೆ ?

1. ಸಂಸ್ಕೃತಿ
2. ಸಂವೇದನಾತ್ಮಕ
3. ಆದರ್ಶವಾದುದು
4. ತಾಂತ್ರಿಕ

**ಸಂಕೇತಗಳು :**

(A) 1 ಮತ್ತು 4 ಮಾತ್ರ (B) 1 ಮತ್ತು 2 ಮಾತ್ರ

(C) 2, 3 ಮತ್ತು 4 (D) 1, 2 ಮತ್ತು 3

**36.** ಕೆಳಗೆ ನೀಡಿರುವ ಹೇಳಿಕೆಗಳಲ್ಲಿ ಯಾವುದು ಸರಿ ?

1. ಆಯವ್ಯಯವು ಆಡಳಿತದ ಮೇಲೆ ಶಾಸನೀಯ ನಿಯಂತ್ರಣದ ಸಾಧನ
2. ಆಯವ್ಯಯವು ಆಡಳಿತದ ಮೇಲೆ ನ್ಯಾಯಾಂಗೀಯ ನಿಯಂತ್ರಣದ ಸಾಧನ
3. ಆಯವ್ಯಯವು ವ್ಯಾಪಕವಾದ ಯೋಜನಾ ದಾಖಲೆ
4. ಆಯವ್ಯಯವು ಆಡಳಿತದ ಮೇಲೆ ಜನತಾ ನಿಯಂತ್ರಣದ ಸಾಧನ

**ಸಂಕೇತಗಳು :**

(A) 1 ಮತ್ತು 4 ಮಾತ್ರ (B) 1 ಮತ್ತು 2 ಮಾತ್ರ

(C) 2, 3 ಮತ್ತು 4 (D) 1, 3 ಮತ್ತು 4

**37.** ಈ ಕೆಳಗಿನವುಗಳಲ್ಲಿ ಯಾವುದು ಸಂಘಟನಾ ಬೆಳವಣಿಗೆಯ ದೃಷ್ಟಿಕೋನವಲ್ಲ ?

(A) ಗ್ರಿಡ್ ದೃಷ್ಟಿಕೋನ

(B) ಹಿಮ್ಮುಖ ಸಮೀಕ್ಷಾ ವಿಧಾನ

(C) ಸಮಾಲೋಚನಾ ಪ್ರಕ್ರಿಯೆ

(D) ಪೀಟರ್ ತತ್ವಗಳು

**38.** ಕೆಳಗಿನವುಗಳನ್ನು ಪರಿಗಣಿಸಿ – ವರ್ತನಾವಾದಕ್ಕೆ ಸಂಬಂಧಿಸಿರುವವು

1. ಸಾಮಾಜಿಕ – ಮಾನಸಿಕಾತ್ಮಕತೆ
2. ಅನುಭವಜನ್ಯ ಕಾರ್ಯ
3. ಅನುಸರಣಾ ವಿಶ್ಲೇಷಣೆ
4. ಕಂದಾಚಾರ ಸ್ಥಿತಿ

**ಸಂಕೇತಗಳು :**

(A) 1, 2 ಮತ್ತು 3 (B) 2, 3 ಮತ್ತು 4

(C) 1, 2 ಮತ್ತು 4 (D) 1 ಮತ್ತು 3 ಮಾತ್ರ

**39.** ಕೆಳಗಿನ ಯಾವ ಜೋಡಿಗಳು ಸರಿಯಾಗಿವೆ ?

1. ಕುರ್ಟ್ ಲೆವಿನ್ – ಗುಂಪು ವರ್ತನೆ
2. ಮಾನವನ ಅವಶ್ಯಕತೆ ಮತ್ತು ಮನೋಸ್ಥೈರ್ಯ – ಎರಡನೇ ಮಹಾಯುದ್ಧದ ಕಾಲದಿಂದ
3. ವಿಲಿಯಂ ಊಚಿ – ಅಮೇರಿಕಾ ಮತ್ತು ಯುರೋಪಿನ ಸಂಘಟನೆಯೊಡನೆ ಹೋಲಿಕೆ

**ಸಂಕೇತಗಳು :**

(A) 1 ಮತ್ತು 2 ಮಾತ್ರ (B) 1 ಮತ್ತು 3 ಮಾತ್ರ

(C) 2 ಮತ್ತು 3 ಮಾತ್ರ (D) 1, 2 ಮತ್ತು 3

**40.** ''ಸಂವಹನ ಆಡಳಿತದ ಹೃದಯ'' ಎಂದು ಹೇಳಿದವರಾರು ?

(A) ಫಿಫ್ನರ್ (B) ಗ್ಲಾಡೆನ್

(C) ಎಲ್.ಡಿ. ವೈಟ್ (D) ಲಿಂಡಾಲ್ ಉರ್ವಿಕ್

**34.** Which of the following were outlined by Max Weber as key characteristics of bureaucracy ?

1. System of supervision and subordination
2. Unity of command
3. Training in job requirement and skill

**Codes :**

(A) 1 & 2 only (B) 2 & 3 only

(C) 1 & 3 only (D) 1, 2 and 3

**35.** What are chief barries to interpersonal communication ?

1. Cultural
2. Perceptual
3. Ideological
4. Technological

**Codes :**

(A) 1 and 4 only (B) 1 and 2 only

(C) 2, 3 and 4 (D) 1, 2 and 3

**36.** Which of the statements given below are correct ?

1. Budget is a tool of legislative control over administration
2. Budget is a tool of judicial control over administration
3. Budget is a comprehensive plan document
4. Budget is a tool of public control over administration

**Codes :**

(A) 1 and 4 only (B) 1 and 2 only

(C) 2, 3 and 4 (D) 1, 3 and 4

**37.** Which one of the following is not our approach for organisational development ?

(A) Grid approach

(B) Survey feedback method

(C) Process consultation

(D) Peter principle

**38.** Consider the following behavioural approach in known for

1. Socio-psychological
2. Empirical work
3. Prescriptive analysis
4. Dogmatic position

**Codes :**

(A) 1, 2 and 3 (B) 2, 3 and 4

(C) 1, 2 and 4 (D) 1 and 3 only

**39.** Which of the following pairs are correctly matched ?

1. Kurt Lewin – Group behaviour
2. Human needs and motivation – Period following the World War – II
3. William Ouchi – Comparison between American and European organisation

**Codes :**

(A) 1 and 2 only (B) 1 and 3 only

(C) 2 and 3 only (D) 1, 2 and 3

**40.** Who said "Communication is the heart of management" ?

(A) Piffiner (B) Gladden

(C) L.D. White (D) Lyndall Urwick

**41.** ಪ್ರಾಯೋಗಿಕ ಸಂಶೋಧನೆಯಲ್ಲಿ ಅವಶ್ಯಕತೆಯಿಲ್ಲದ ಪ್ರಕ್ರಿಯೆಯನ್ನು

(A) ಅವಲೋಕನ

(B) ನಿಯಂತ್ರಿಸುವುದು

(C) ದತ್ತಾಂಶಗಳನ್ನು ಮರೆಮಾಚುವುದು ಹಾಗೂ ಪುನರಾವರ್ತನೆ ಮಾಡುವುದು

(D) ಪಾರಮಾರ್ಥಿಕ ಗ್ರಂಥಗಳ ಸಂಗ್ರಹಣೆ

**42.** ಪ್ರಾಯೋಗಿಕ ಅಧ್ಯಯನವು ನಿರ್ದಿಷ್ಟ ತತ್ವದ ಮೇಲೆ ಆಧಾರಿತವಾಗಿರುತ್ತದೆ

(A) ಏಕ ಪರಿವರ್ತಕ

(B) ಪುನರಾವರ್ತನೆ

(C) ಆವರಿಸಿಕೊಳ್ಳುವುದು

(D) ವಸ್ತುವಿಷಯದ ಆಸಕ್ತಿ

**43.** ಗುಣಾತ್ಮಕ ಪರಿವರ್ತಕ ಘಟಕಗಳು ಎಲ್ಲಾ ಸಂಗತಿಗಳ ಉದಾಹರಣೆಗಳಾಗಿರುತ್ತದೆ, ಒಂದನ್ನು ಹೊರತುಪಡಿಸಿ.

(A) ಧರ್ಮ ಹಾಗೂ ಜಾತಿಗಳು

(B) ಲಿಂಗ

(C) ಅವಲೋಕನ

(D) ವಸ್ತುವಿಷಯದ ಆಸಕ್ತಿ

**44.** ವೈಜ್ಞಾನಿಕ ಜ್ಞಾನದ ಉದಾಹರಣೆ ಎಂದರೆ ?

(A) ಒಬ್ಬ ಪ್ರವಾದಿಯ ಅಥವಾ ಮಹಾಪುರುಷನ ಆದೇಶ

(B) ಸಾಮಾಜಿಕ ಸಂಪ್ರದಾಯಗಳು ಹಾಗೂ ಪದ್ಧತಿಗಳು

(C) ಧಾರ್ಮಿಕ ಗ್ರಂಥಗಳು

(D) ಪ್ರಯೋಗ ಶಾಲೆಯ ಹಾಗೂ ಕ್ಷೇತ್ರ ಕಾರ್ಯದ ಪ್ರಯೋಗಗಳು

**45.** ಅಧ್ಯಾಪಕ ತನ್ನ ವೃತ್ತಿ ಜೀವನದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾನೆ. ಅವನು ಈ ಕೆಳಗೆ ಕಾಣಿಸಿದಂತೆ ಯಾವ ಕ್ರಮವನ್ನು ಕೈಗೊಳ್ಳಬಹುದು ?

(A) ಇಂತ ಪ್ರಸಂಗಗಳಲ್ಲಿ ತನ್ನ ವೃತ್ತಿಗೆ ರಾಜೀನಾಮೆ ನೀಡಬೇಕು

(B) ಆ ಸಮಸ್ಯೆಯನ್ನು ಕುರಿತು ಸಂಶೋಧನೆಯನ್ನು ಮಾಡಿ ಪರಿಹಾರವನ್ನು ಕಂಡುಹಿಡಿಯುತ್ತಾನೆ

(C) ಸಮಸ್ಯಾತ್ಮಕ ಸ್ಥಿತಿಗತಿಗಳಿಂದ ದೂರವಿರುವುದು

(D) ತನ್ನ ಸಂಸ್ಥೆಯ ಮುಖ್ಯಸ್ಥರ ಸಹಾಯವನ್ನು ಪಡೆದುಕೊಳ್ಳುತ್ತಾನೆ

**46.** ಪ್ರಾಕ್ ಕಲ್ಪನೆಯ ನಿರೂಪಣೆಯು ಅವಶ್ಯಕವಾಗಿರುವುದಿಲ್ಲ.

(A) ಕ್ಷೇತ್ರ ಕಾರ್ಯ ಅಧ್ಯಯನಗಳು

(B) ವಾಸ್ತವ ಅಂಶಗಳ ಪರಿಶೋಧನ ಅಧ್ಯಯನಗಳು (ಐತಿಹಾಸಿಕ)

(C) ಮೌಲ್ಯಧಾರಿತ ಅಧ್ಯಯನಗಳು

(D) ಪ್ರಾಯೋಗಿಕ ಅಧ್ಯಯನಗಳು

**ಸೂಚನೆ :** ಕೆಳಗಿನ ಪ್ರಬಂಧವನ್ನು ಓದಿ ಪ್ರಶ್ನೆ **47** ರಿಂದ **50** ರ ವರೆಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅಭಿವೃದ್ಧಿ ವ್ಯವಸ್ಥೆಯಲ್ಲಿ ರಾಜ್ಯಾಡಳಿತ ಮಹತ್ವವು ಧೋರಣೆಗಳ ನಿರೂಪಕರ, ಸಂಶೋಧಕರ ಹಾಗೂ ಅಭಿವೃದ್ಧಿ ತಜ್ಞರ ಗಮನವನ್ನು 1980 ರಿಂದ ಆಕರ್ಷಿಸಿರುತ್ತದೆ. ಅನೇಕ ರಾಷ್ಟ್ರಗಳು ರಾಜ್ಯಾಡಳಿತಕ್ಕಾಗಿ ಅಭಿವೃದ್ಧಿ ಮಾದರಿಯನ್ನು ಸ್ವೀಕರಿಸಲಾಯಿತು. ಇದರಿಂದಾಗಿ ಆದೇಶಾತ್ಮಕವಾದ ಅರ್ಥವ್ಯವಸ್ಥೆಯೂ ಸ್ವತಂತ್ರ ಮಾರುಕಟ್ಟೆ ವ್ಯವಸ್ಥೆಗೆ ಅವಕಾಶ ಕಲ್ಪಿಸಿತು. ಹೀಗಾಗಿ ರಾಷ್ಟ್ರಾಡಳಿತದ ವೈಫಲ್ಯ ಕಂಡು ಬಂದಿತು, ಜಾಗತೀಕರಣಕ್ಕಾಗಿ ಹಾಗೂ ತಾಂತ್ರಿಕ ಕ್ರಾಂತಿಗಾಗಿ ದಾರಿ ಮಾಡಿಕೊಟ್ಟವು. ರಾಷ್ಟ್ರ ಸರ್ಕಾರವು ಧೋರಣಾತ್ಮಕ ನಿರೂಪಣೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಸರಕು ಸಾಮಗ್ರಿಗಳನ್ನು ಉತ್ಪಾದಿಸುವಲ್ಲಿ ಅವುಗಳ ವಿತರಣೆಯಲ್ಲಿ ಹಾಗೂ ಸೇವೆಗಳನ್ನು ಸಲ್ಲಿಸುವಲ್ಲಿ ಅಸಮರ್ಪಕ ನಿರ್ವಹಣೆಗಾಗಿ ಸಾರ್ವಜನಿಕರ ಟೀಕೆಗೆ ಗುರಿಯಾಗಿರುತ್ತದೆ. ಚುನಾಯಿತ ಪ್ರತಿನಿಧಿಗಳು ವ್ಯವಹಾರಿಕ ಪ್ರಜ್ಞಾಹೀನತೆ, ವಿಶಾಲ ದೃಷ್ಟಿಕೋನ ಹೀನತೆ ಹಾಗೂ ಹೊಣೆಗಾರಿಕೆಯನ್ನು ನುಣಿಚಿಕೊಳ್ಳುವುದರ ಮೂಲಕ ವೈಫಲ್ಯವನ್ನು ಎದುರಿಸುತ್ತಾರೆ. ನೌಕರಶಾಹಿ ವರ್ಗವು ರಾಷ್ಟ್ರ ಕ್ರಿಯಾ ಶಕ್ತಿಯ ಸಾಧನವಾಗಿರುತ್ತದೆ, ನೌಕರಶಾಹಿ ವರ್ಗಕ್ಕೆ ಅಪರಿಮಿತ ಅಧಿಕಾರವಿರುತ್ತದೆ. ಇದರಿಂದಾಗಿ ಹೊಣೆಗೇಡಿತನ, ಅದಕ್ಷತೆ ಹಾಗೂ ಭ್ರಷ್ಟಾಚಾರ ಹೆಚ್ಚಾಗಿರುತ್ತದೆ. ಕಾನೂನುಗಳು, ನಿಬಂಧನೆಗಳು ಹಾಗೂ ವಿಧಿ ವಿಧಾನಗಳು ಅಭಿವೃದ್ಧಿಗಾಗಿ ಸಹಾಯಕಾರಿಯಾಗಿರುವುದಿಲ್ಲ. ಸ್ವತಂತ್ರ ನ್ಯಾಯಾಂಗವಿದ್ದರೂ ಯಾವ ಪ್ರಯೋಜನ ಉಂಟಾಗಿರುವುದಿಲ್ಲ.

ರಾಷ್ಟ್ರ ಸರ್ಕಾರವು ಉದ್ಯಮಗಳನ್ನು ಹಾಗೂ ಜನೋಪಯೋಗಿ ನಿಗಮಗಳನ್ನು ಮೂಲಭೂತ ಸೌಕರ್ಯಗಳನ್ನು ಉದಾಹರಣೆಗಾಗಿ ವಿದ್ಯುಚ್ಛಕ್ತಿ, ದೂರಸಂಪರ್ಕ ಸಾರಿಗೆ (ರಸ್ತೆಸಾರಿಗೆ, ರೈಲ್ವೆ ಮಾರ್ಗ, ವಾಯುಮಾರ್ಗ, ಜಲಮಾರ್ಗ) ಹಾಗೂ ಬಂದರುಗಳನ್ನು ಸ್ಥಾಪಿಸುವಲ್ಲಿ ವಿಫಲವಾಗಿರುತ್ತವೆ.

**41.** The process not needed in experimental research is

(A) Observation

(B) Controlling

(C) Manipulation and replication

(D) Reference collection

**42.** The Experimental study is based on the law of

(A) Single variable

(B) Replication

(C) Occupation

(D) Interest of the subject

**43.** All are examples of qualitative variable except

(A) Religion and castes

(B) Sex

(C) Observation

(D) Interest of the subject

**44.** The example of scientific knowledge is

(A) Authority of the prophet or great person

(B) Social traditions and customs

(C) Religious scriptures

(D) Laboratory and field experiments

**45.** A teacher encounters various problems during his professional experience. He should

(A) resign from his post in such situations

(B) do research on that problem and find a solution

(C) avoid the problematic situations

(D) take the help of head of the institution

**46.** Formulation of hypothesis may not be necessary in

(A) survey studies

(B) fact finding (historical) studies

(C) normative studies

(D) experimental studies

**Note :** Read the passage below and answer the questions that follow based on your understanding of the passage. (**47 – 50**).

The significance of governance in development strategy has attracted the attention of the policy makers, researchers and development experts since 1980s. Many countries adopted a development model of governance with the paradigm shift of 'Command economy' to the 'Market economy' with the increasing realization of states failure, globalisation and technological revolution. The State (Government) which is playing a prominent role as policy maker, owner and regulator to produce and deliver goods and services has come for criticism for its non performance. The elected representatives without pragmatism, vision and accountability have failed to evolve innovative policies for promoting, inclusive growth. The bureaucracy which is the instrument of state action with enormous power has been associated with non responsiveness, inefficiency and corruption. The laws, regulations and procedures are not conducive for development, inspite of independent judiciary.

The state owned enterprises / utilities have failed to provide infrastructure facilities like power, telecommunication, transportation (roadways, railways, airways, waterways)

ಹೀಗಾಗಿ ಆರ್ಥಿಕ ಅಭಿವೃದ್ಧಿಯನ್ನು ಸಾಗಿಸಲು ಹಾಗೂ ಉತ್ತಮ ಜೀವನವನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಕೆಳಹಂತದ ಸರ್ಕಾರಿ ಸಂಸ್ಥೆಗಳು ಸಾರ್ವಜನಿಕ ಸೇವೆಗಳನ್ನು – ಸಾಮಾಜಿಕ ಮೂಲಭೂತ ಸೌಕರ್ಯ, ಶಿಕ್ಷಣ, ಆರೋಗ್ಯ, ನೀರು ಪೂರೈಕೆ ಹಾಗೂ ಸಾಮಾಜಿಕ ಸುರಕ್ಷತೆ ಇವುಗಳನ್ನು ಪೂರೈಸುವಲ್ಲಿ ವಿಫಲವಾಗಿರುತ್ತವೆ. ಪ್ರಸಕ್ತ ಅಸ್ತಿತ್ವದಲ್ಲಿರುವಂತಹ, ಸಾರ್ವಜನಿಕ ಸೇವಾ ಸಂಸ್ಥೆಗಳು ಅವಕಾಶ ವಂಚಿತರಿಗೆ ಸೇವೆಸಲ್ಲಿಸಲು ವಿಫಲಗೊಂಡಿರುತ್ತವೆ.

ಸರ್ಕಾರದ ವೈಫಲ್ಯವೂ ವಿದ್ವಾಂಸರನ್ನು, ಆಡಳಿತಗಾರರನ್ನು ಹಾಗೂ ಅಭಿವೃದ್ಧಿ ತಜ್ಞರನ್ನು ರಾಷ್ಟ್ರದ ರಚನೆ ಹಾಗೂ ಕಾರ್ಯನಿರ್ವಹಣೆಯಲ್ಲಿ ಬದಲಾವಣೆಗಳನ್ನು ಉಂಟುಮಾಡಲು ಪ್ರೇರೇಪಿಸುತ್ತವೆ. ಉನ್ನತ ಮಟ್ಟದಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಬದಲಾವಣೆ ತರಲು ಹಾಗೂ ರಾಜ್ಯದ ಹಸ್ತಕ್ಷೇಪವನ್ನು ಕಡಿತಗೊಳಿಸಲು ಸುಧಾರಣೆಗಳನ್ನು ಹಮ್ಮಿಕೊಳ್ಳಲಾಗಿದೆ. ರಾಷ್ಟ್ರದ ಪಾತ್ರವೂ (ಸಹಕರಿಸುವ, ಗಾತ್ರವನ್ನು ಕುಗ್ಗಿಸುವುದು, ಪಾರದರ್ಶಕತೆಯನ್ನು ಉಂಟುಮಾಡುವುದು, ಧೋರಣೆಗಳು ಹಾಗೂ ನಿಯಮಗಳನ್ನು ರೂಪಿಸಲು ಹೊಣೆಗಾರಿಕೆಯನ್ನು ನಿರ್ಧರಿಸಲು) ಮಾರುಕಟ್ಟೆ (ಹಣ ಹೂಡಿಕೆಯನ್ನು ಕಡಿತಮಾಡುವುದು, ಖಾಸಗೀಕರಣ, ಗುತ್ತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು, ಹೊರಗುತ್ತಿಗೆ ವ್ಯವಸ್ಥೆಯನ್ನು ಅನುಸರಿಸುವುದು, ಖಾಸಗಿ ಹಾಗೂ ಸಹಭಾಗಿತ್ವ) ಹಾಗೂ ನಾಗರೀಕ ಸಮಾಜದಲ್ಲಿ ಭಾಗಿ ಆಗುವುದು. ಪ್ರಾತಿನಿಧ್ಯವನ್ನು ನೀಡುವುದು, ಹೊಣೆಗಾರಿಕೆಯನ್ನು ಕಲ್ಪಿಸುವುದು ಹಾಗೂ ಸಶಕ್ತೀಕರಣ, ಸಾಮಾಜಿಕ ಬಂಡವಾಳವನ್ನು ಮಾಡುವುದು. ಇವುಗಳ ಮೇಲೆ ಅವಲಂಬಿತವಾಗಿರುತ್ತವೆ. ಇವೆಲ್ಲವುಗಳನ್ನು ಅನುಸರಿಸಿದರೆ ಆರ್ಥಿಕ ಬೆಳವಣಿಗೆಯನ್ನು ಹಾಗೂ ಉತ್ತಮ ಜೀವನದ ವ್ಯವಸ್ಥೆಯನ್ನು ರೂಪಿಸಲು ಸಾಧ್ಯವಾಗುತ್ತದೆ.

ಸಮಾಜಕ್ಕೆ ಸರಕು ಸಾಮಗ್ರಿ ಹಾಗೂ ಸೇವೆಗಳನ್ನು ಸಲ್ಲಿಸಲು ಸಾಧ್ಯವಾಗುತ್ತದೆ. ರಾಷ್ಟ್ರವು ಮಾರುಕಟ್ಟೆಯೊಂದಿಗೆ ಹಾಗೂ ನಾಗರೀಕ ಸಮಾಜದೊಂದಿಗೆ ಧೋರಣೆಗಳನ್ನು ನಿರೂಪಿಸಲು ಹಾಗೂ ಕಾನೂನುಗಳನ್ನು ಜಾರಿಗೊಳಿಸಲು, ಹೆಚ್ಚು ಹೆಚ್ಚು ಸರಕು ಸಾಮಗ್ರಿಗಳನ್ನು ವಿತರಣೆ ಮಾಡಲು ಅವಕಾಶ ವಂಚಿತ ಜನರ ನಿರೀಕ್ಷೆಗಳಿಗೆ ಅನುಗುಣವಾಗಿ ಸೇವೆಸಲ್ಲಿಸಲು ಸಾಧ್ಯವಾಗುತ್ತದೆ. ಮಾಹಿತಿ ಹಾಗೂ ಸಂಪರ್ಕ, ವಿಜ್ಞಾನ ಕ್ಷೇತ್ರ ಅನ್ವಯದ ಮೂಲಕ ಹಾಗೂ ಪ್ರಜಾಸತ್ತಾತ್ಮಕ ವಿಚಾರಣೆಯ ಮೂಲಕ ರಾಷ್ಟ್ರದ ಆಡಳಿತ ವ್ಯವಸ್ಥೆಯಲ್ಲಿ ಅನೇಕ ಬದಲಾವಣೆಯನ್ನು ಉಂಟುಮಾಡಲಾಗಿದೆ.

**47.** ಆದೇಶಾತ್ಮಕ ವ್ಯವಸ್ಥೆಯಿಂದ ಮಾರುಕಟ್ಟೆ ವ್ಯವಸ್ಥೆಗೆ ಬದಲಾವಣೆಯಾಗುವಾಗ ಪ್ರಧಾನ ಅಂಶ ಯಾವುದು ?

(A) ರಾಜಕೀಯ ಧುರೀಣರು

(B) ನೌಕರಶಾಹಿ ವರ್ಗ

(C) ರಾಜ್ಯಾಡಳಿತದ ವೈಫಲ್ಯ

(D) ಅಸಂಗತವಾದ ಕಾನೂನುಗಳು

**48.** ಸಾಮಾಜಿಕ ಮೂಲಭೂತ ಸೌಕರ್ಯವೆಂದರೇನು ?

(A) ಶಿಕ್ಷಣ, ಆರೋಗ್ಯ

(B) ವಿದ್ಯುತ್ ಘಟಕ, ದೂರ ಸಂಪರ್ಕ

(C) ರೈಲ್ವೇ ಮಾರ್ಗಗಳು, ವಾಯು ಮಾರ್ಗಗಳು

(D) ಜಲ ಮಾರ್ಗಗಳು, ಸಾರಿಗೆ

**49.** ಮಾರುಕಟ್ಟೆ ತತ್ವದಲ್ಲಿ ಯಾವ ಸುಧಾರಣೆಗಳು ಅಡಕಗೊಂಡಿರುತ್ತವೆ ?

(A) ಹೂಡಿಕೆಯಿಂದ ಹಿಂಜರಿಯುವುದು, ಬಳಕೆದಾರರ ಶುಲ್ಕಗಳು

(B) ಊಹಿಸಬಹುದಾದಂತಹ ಧೋರಣೆಗಳು ಹಾಗೂ ನಿಯಮಗಳು

(C) ಪ್ರಾತಿನಿಧ್ಯ, ಸಶಕ್ತೀಕರಣ

(D) ಸಾಮಾಜಿಕ ಬಂಡವಾಳ, ಸಶಕ್ತೀಕರಣ

**50.** ನಾಗರೀಕ ಸಮಾಜದೊಂದಿಗೆ ಯಾವ ಸುಧಾರಣೆಗಳನ್ನು ಅಳವಡಿಸಿಕೊಳ್ಳಲಾಗಿದೆ ?

(A) ಹಣಕಾಸು ಹೂಡಿಕೆಯಿಂದ ಹಿಂಜರಿತ, ಖಾಸಗೀಕರಣ

(B) ಗಾತ್ರವನ್ನು ಮೊಟಕುಗೊಳಿಸುವುದು, ಒಪ್ಪಂದ ಮಾಡಿಕೊಳ್ಳುವುದು

(C) ಪಾಲ್ಗೊಳ್ಳುವಿಕೆ, ಸಶಕ್ತೀಕರಣ

(D) ಸ್ವತಂತ್ರ ನಿಯಂತ್ರಕರು, ಹೊರಗುತ್ತಿಗೆ

ports (air, sea) water supply and sewage disposal which are critical for economic growth and quality of life. Even the grass root level government delivery mechanisms have failed to provide social infrastructure services like education, health, water sanitation and social security to the disadvantaged due to leakages and wastages. The existing delivery mechanisms have failed to provide services to the disadvantaged as well.

The government failure has compelled scholars, practitioners and development experts/agencies to recommend changes in both the structure and the functioning of the state as well as the change in the macro-policy governing the economic activities. With this changing perspective on state intervention, many reforms have been initiated redefining the role of the state (facilitating, downsizing, transparent and predictable rules and policies, participation, responsiveness, accountability, independent regulators) market (disinvestment/privatization, contracting/out sourcing, public private partnerships, user charges) and civil society (participation, voice, representation, responsiveness, empowerment, social capital) to produce more goods and services. Now the state along with market and civil society is responsible for formulation and enforcement of policies/laws in producing more goods and services to the expectation/satisfaction of people particularly disadvantaged. Even the application of ICT and the introduction of democratic decentralisation have also brought many changes in the governance structure of the State.

**47.** What is the key element for the paradigm shift of 'Command economy' to the market economy ?

(A) Political leaders

(B) Bureaucracy

(C) State failure

(D) Outdated laws

**48.** What is social infrastructure ?

(A) Education, Health

(B) Power sector, Telecommunication

(C) Railways, Airways

(D) Waterways, Transportation

**49.** What are the reforms associated with market philosophy ?

(A) Disinvestment, user charges

(B) Predictable policies and rules

(C) Representation, empowerment

(D) Social capital, empowerment

**50.** What are the reforms associated with the civil society ?

(A) Disinvestment, privatisation

(B) Downsizing, contracting

(C) Participation, empowerment

(D) Independent regulators, out sourcing

ಚಿತ್ತು ಬರಹಕ್ಕಾಗಿ ಸ್ಥಳ

**Space for Rough Work**